ವಿ. ಹಮೀದ್, ವಿಟ್ಲ
ಹುಡುಗಿ ಲೆಗಿನ್ಸ್ ಹೆಚ್ಚು ಇಷ್ಟ ಪಡುತ್ತಾಳೇಕೆ?




ನೋಟಕ್ಕೂ ಚೆನ್ನ, ಓಟಕ್ಕೂ ಚೆನ್ನವಾದ್ದರಿಂದ.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು
ಕೋವಿಡ್‌ಗೆ ವ್ಯಾಕ್ಸಿನ್ ಬಂದರೆ ಲಾಸ್ ಯಾರಿಗೆ ರಾಮ್?
ತಮ್ಮ ವ್ಯಾಪಾರಕ್ಕೇ ಕೈ ಚೆಲ್ಲಬೇಕಾದ ಸ್ಯಾನಿಟೈಜರ್‌ನವರಿಗೆ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
ಕೊರೊನಾದ ಆರ್ಭಟ ಕಡಿಮೆ ಆಯ್ತಾ ಅಥವಾ ಜನಕ್ಕೆ ಭಯ ಕಡಿಮೆ ಆಯ್ತಾ?
ಕೊರೊನಾವೇ ಸುದ್ದಿವಾಹಿನಿಗಳ ಆರ್ಭಟದಿಂದ ಬೆದರಿ ನಿತ್ರಾಣವಾಯಿತು.

ಮಲ್ಲು ಬಾಗೂರು, ದೇವದುರ್ಗ
ಅರೇಂಜ್ಡ್ ಮ್ಯಾರೇಜ್‌ಗೂ, ಲವ್ ಮ್ಯಾರೇಜ್‌ಗೂ ಏನು ವ್ಯತ್ಯಾಸ?




ಲವ್ ಮ್ಯಾರೇಜಲ್ಲಿ ಚಪ್ಪಲಿಗಳ ಕಳವು ಕಡಿಮೆ.

ಗಣಪತಿ ಕಂಚಿಪಾಲ, ಯಲ್ಲಾಪುರ
ದೇಶ ಆಳೋ ರಾಜಕಾರಣಿಗಳಿಗೆ ಮನೆ ಆಳೋದು ಕಷ್ಟವಂತೆ. ನಿಜವಾ ಸಾರ್?
ಹೂಂ. ಮನೆಯನ್ನು ಅಡ್ಡಾದಿಡ್ಡಿ ನಡೆಸಲು ಹೆಂಡತಿ ಬಿಡುವುದಿಲ್ಲವಲ್ಲ.

ಸ್ವಾತಿ ಎಂ.ಎಸ್. ಗೌರಿಬಿದನೂರು
ಮಂತ್ರವಾದಿಗಳು ನಿಂಬೆಹಣ್ಣನ್ನೇ ಮಂತ್ರಿಸಿಕೊಡುತ್ತಾರಲ್ಲ, ಏಕೆ?
ಹಿಡಿತಕ್ಕೆ ಸಿಗುವ, ಹುಳಿ ಹಿಂಡಲು ಅನುಕೂಲ ಆಗುವ ವಸ್ತು, ವ್ಯಕ್ತಿಗಳೆಂದರೆ ಅವರಿಗೆ ಪ್ರಾಣ.

ಬಿದರಹಳ್ಳಿ ಚನ್ನವೀರಪ್ಪ. ಹೂವಿನಹಡಗಲಿ
ನಮ್ಮ ಸಂಕಲ್ಪ ದೃಢವಾಗಿದ್ದರೆ ಯಾವ ತೊಂದರೆ, ಸೋಲುಗಳು ನಮ್ಮನ್ನು ದುರ್ಬಲಗೊಳಿಸುವುದಿಲ್ಲವಂತೆ. ಹೌದೆ?
ಕಡುಬು ಮಾಡಲು ಸಂಕಲ್ಪಿಸಿ ಬೆಲ್ಲಸಕ್ಕರೆ ತರದಿದ್ದರೆ ಆಗದು. ಸಂಕಲ್ಪಕ್ಕೆ ತಕ್ಕ ಅರಿವು, ಶ್ರಮ ಇರಬೇಕು.

ಬಿಂದುಶ್ರೀ, ಗೌರಿಬಿದನೂರು
ಕಾಫಿ, ಟೀ, ಆಲ್ಕೋಹಾಲ್ ಇಲ್ಲದಿದ್ದಲ್ಲಿ ಪ್ರಪಂಚದ ಜನರ ಸ್ಥಿತಿ ಏನಾಗುತ್ತಿತ್ತು?
ಜನಸಮುದ್ರಮಥನದಿಂದ ಅನ್ಯ ಕಾ(ರ್ಕೋಟಕ) ಪೀ(ಯೂಷ) ಉದ್ಭವಿಸುತ್ತಿತ್ತು.

ಅನಸೂಯ ಟಿ. ಕೇದಿಗೆಮನೆ
ಕುಲದೇವತೆ, ಇಷ್ಟದೇವತೆ, ಗ್ರಾಮದೇವತೆ; ಈ ಮೂವರಲ್ಲಿ ಯಾರಿಂದ ಒಳಿತು?
ಇವೆಲ್ಲ ಎಕ್ಸ್‌ಟರ್ನಲ್ ಸಪೋರ್ಟ್; ಗೃಹದೇವತೆಯಿಂದ ಒಳಿತಾದರೆ ಎಲ್ಲೆಡೆಯೂ ಒಳಿತೇ.

ಮಧುರ, ಬೆಂಗಳೂರು
ಹುಟ್ಟುಸಾವಿನ ಮುಹೂರ್ತ ತಿಳಿಯದಿರುವಾಗ ಎಲ್ಲ ಘನಕಾರ್ಯಕ್ಕೂ ಮುಹೂರ್ತ ನೋಡುವ ಅಗತ್ಯವಿದೆಯೆ?
ಅದೊಂದು ಮಾನಸಿಕ ಅಂಶವಷ್ಟೆ. 'ಸುಖದುಃಖೇ ಸಮೇಕೃತ್ವಾ...' ಧೋರಣೆ ಇದ್ದರೆ ಮುಹೂರ್ತ ಅನಗತ್ಯ.

ಎಸ್.ಎಸ್. ರಾವ್, ಯುಎಸ್‌ಎ
ಮದುವೆಯ ಸಮಸ್ಯೆಗಳ ಬಗ್ಗೆ ಮೊದಲೇ ಯಾರೂ ಏಕೆ ಎಚ್ಚರಿಸುವುದಿಲ್ಲ?
ಏಕೆಂದರೆ ವಿವಾಹ/ವಿವಾದಗಳಲ್ಲಿ ಎದುರಿನವರ ಬಲಾಬಲಗಳು ತಿಳಿಯುವುದು ಕಣಕ್ಕಿಳಿದಾಗಲೇ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
ಇತ್ತೀಚೆಗೆ ಸೈನಿಕರಿಗೆ ದೇಶಪ್ರೇಮಕ್ಕಿಂತ ಹೆಂಡತಿಯ ವ್ಯಾಮೋಹ ಹೆಚ್ಚಾಗಲು ಕಾರಣವೇನು?
ಯುದ್ಧವಿಲ್ಲವಲ್ಲ! ಯೋಧರಿಗೆ ಜೀವನ ಸಮರಮಯವಾಗಿರಬೇಕು ಅಥವಾ ರಸಮಯವಾಗಿಬೇಕು.

## ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ
'ಸುಮುಹೂರ್ತ ಸಾವಧಾನ...' ಸೊಲ್ಲಿನಿಂದ ಸುಲಗ್ನವಾದವರ ಸಂಸಾರಗಳೇಕೆ ಸರಾಗವಾಗಿ ಸಾಗುತ್ತಿಲ್ಲ?
ಸುರೆ ಸುವರ್ಣ ಸುವಾಸಿನಿಯರ ಸರಿದಾಟ ಸರಿದಾರಿಯಿಂ ಸರಿಯಲದು ಸರಸದ ಸಮಾಧಿಗೆ ಸೋಪಾನವು.

ಪಿ.ಜೆ. ರಾಘವೇಂದ್ರ, ಮೈಸೂರು
ಕೊರೊನಾ ಪುಲ್ಲಿಂಗವೋ, ಸ್ತ್ರೀಲಿಂಗವೋ?
ಎದುರು ಬರುವ ಪೌರುಷ, ಹೆಣ್ಣಿನ ಸಂಯಮ ಎರಡೂ ಇಲ್ಲವಾದ್ದರಿಂದ ನಪುಂಸಕಲಿಂಗವೇ.

ಎಂ.ವಿ. ಕುಮಾರ್, ಬೆಂಗಳೂರು
ಮೋಸ ಮಾಡದೆ ಮಾಡುವಂತಹ ವ್ಯಾಪಾರ ಯಾವುದು?
ಒಂದು ರೂಪಾಯಿ ಮೋಸವಾದರೂ ರದ್ದಾಗಿಬಿಡುವ ಭಯವಿರುವ ಎಮ್ಮೆಲ್ಲೆ ಮಾರಾಟ.

ನಾಜ್ಯೋತಿ, ಹೂವಿನಹಡಗಲಿ
ವಕೀಲರು ಮತ್ತು ಪುರೋಹಿತರಲ್ಲಿ ಯಾರ ಸ್ನೇಹ ಹೆಚ್ಚು ಒಳ್ಳೆಯದು?




ಪುರೋಹಿತರದೇ ಕೊಟ್ಟ ದುಡ್ಡಿಗೆ ಕನಿಷ್ಠ ತೀರ್ಥಪ್ರಸಾದಗಳಾದರೂ ದೊರಕಿಯಾವು.

ದೀಪಕ್ ಘಾಟೆ,
ನಾನು ಕಾನನಕ್ಕೆ ಕರೆದರೆ ನನ್ನವಳು ಕೇದಾರಕ್ಕೆ ಎಳೆಯುವವಳಲ್ಲ, ಇಬ್ಬರೂ ಸೇರಿ ಹೋಗುವುದೆಲ್ಲಿಗೆ?
ಕೇದಾರಕ್ಕೆ ಹೋಗದಿದ್ದರೆ ಇದ್ದಲ್ಲೇ ಕಾಡು(ವರ) ಪಾಲಾಗುವುದರಿಂದ....

ಖಾದ್ರಿ ಪ್ರಮೀಳ, ಮೇಲುಕೋಟೆ
ಕೊರೋನಾಗೆ 'ರಾಂ ಬಾಣ' ಯಾವುದು?
ವೈದ್ಯರ ಬಿಲ್ಲಿಗೆ ರೋಗದ ಬಾಣ ಹೂಡದೆ, ಗೃಹದಲ್ಲೇ ತಾಕತ್ತಿಗೆ ಸಾಣೆ ಹಿಡಿಯುವುದು.

■ **ರಾಮ್**

ಪ್ರಶ್ನೆ ಕಳುಹಿಸಲು: **editorsu@sudha.co.in**